<u>ಸಿ.ಸಿ. ನಂ.36/2011</u>
CW-1/PW-4

ದಿನಾಂಕ 17-07-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

4. ನಾನು ಪೊಲೀಸರಿಂದ ಬಿಡಿಸಿಕೊಂಡ ನನ್ನ ಡಿ.ಎಲ್., ಅನ್ನು ಈ ದಿನ ನ್ಯಾಯಾಲಯಕ್ಕೆ ತಂದಿರುತ್ತೇನೆ. ಅದನ್ನು ನ್ಯಾಯಾಲಯದ ಪರಿಶೀಲನೆಗೆ ಹಾಜರುಪಡಿಸಿ, ವಾಪಸ್ಸು ಪಡೆದಿರುತ್ತೇನೆ. ಕರ್ನಾಟಕ ಬ್ಯಾಂಕ್ ಮತ್ತು ಎಸ್.ಬಿ.ಐ., ಬ್ಯಾಂಕ್‌ಗೆ ಸೇರಿದ ನನ್ನ ಎ.ಟಿ.ಎಂ ಕಾರ್ಡ್‌ಗಳನ್ನು ನ್ಯಾಯಾಲಯದ ಪರಿಶೀಲನೆಗೆ ಹಾಜರುಪಡಿಸಿ, ವಾಪಸ್ಸು ಪಡೆದಿರುತ್ತೇನೆ. ಪೊಲೀಸರು ನನ್ನಿಂದ ಮೆಟ್ರೋ ರೈಲ್ ಕಾರ್ಡನ್ನು ಸಹ ಅಮಾನತುಪಡಿಸಿಕೊಂಡಿದ್ದು, ಅದನ್ನು ನಾನು ಪೊಲೀಸರಿಂದ ನನ್ನ ವಶಕ್ಕೆ ಪಡೆದಿರುತ್ತೇನೆ. ಅದನ್ನು ಸಹ ಈ ದಿನ ನ್ಯಾಯಾಲಯದ ಪರಿಶೀಲನೆಗೆ ಹಾಜರುಪಡಿಸಿ, ವಾಪಸ್ಸು ಪಡೆದಿರುತ್ತೇನೆ. ಅದೇ ರೀತಿ ನಾನು ಪೊಲೀಸರಿಂದ ಬಿಡಿಸಿಕೊಂಡ ಪಾನ್ ಕಾರ್ಡನ್ನು ಸಹ ಈ ದಿನ ನ್ಯಾಯಾಲಯದ ಪರಿಶೀಲನೆಗೆ ಹಾಜರುಪಡಿಸಿ, ವಾಪಸ್ಸು ಪಡೆದಿರುತ್ತೇನೆ. ತನಿಖಾಧಿಕಾರಿಗಳು ಜಪ್ತಿ ಮಾಡಿಕೊಂಡ ಕಾರನ್ನು ನೋಡಿದರೆ ಗುರುತಿಸಬಲ್ಲೆ. ವಾಹನವನ್ನು ನನ್ನ ಮಧ್ಯಂತರ ಅಭಿರಕ್ಷೆಗೆ ಬಿಡಿಸಿಕೊಂಡಿದ್ದೆ, ಅದು ಹಳೆಯ ವಾಹನವಾಗಿದ್ದು, ಅದು ಸ್ಕ್ರ್ಯಾಪ್ ಆಗಿರುತ್ತದೆ. ಕಾರ್ ಕೀ ಮತ್ತು ಆರ್.ಸಿ., ಕಳೆದುಹೋಗಿರುತ್ತದೆ. ಕೇಸಿನ ಕಡತದಲ್ಲಿ ಕಾರಿನ ಫೋಟೋ ಸಹ ಲಭ್ಯವಿರುವುದಿಲ್ಲ.

ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು,

**ಕೋರಿಕೆಯನ್ನು ತಿರಸ್ಕರಿಸಲಾಯಿತು.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.